# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ತಿದ್ದುಪಡಿ ಕಲಂ 128 ಮತ್ತು 131 ರಂತೆ ತಯಾರಿಸಲಾಗುವ 11 ಇ ನಕ್ಷೆ ಕಳೆದುಹೋದಲ್ಲಿ ತಾಲ್ಲೂಕು ಕಚೇರಿಗಳಿಂದ ಹಣ ಪಾವತಿಸಿಕೊಂಡು ನಕಲುಗಳನ್ನು ಸಾರ್ವಜನಿಕರಿಗೆ ನೀಡುವ ಬಗ್ಗೆ.

ಓದಲಾಗಿದೆ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಆಯುಕ್ತರು, ಏಕಕಡತ ಪದ್ಧತಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆ ಸಂಖ್ಯೆ :. ತಾಂ.ಪಭೂ.ಘಟಕ 52/08-09 ದಿನಾಂಕ: 7/11/2008 .

★★★★

**ಪ್ರಸ್ತಾವನೆ :**

ಪರವಾನಗಿ ಭೂಮಾಪಕರ ಪದ್ಧತಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ
ಕಲಂ 18, 128 ಮತ್ತು 131 ರ ಮತ್ತು ಕರ್ನಾಟಕ ಭೂ ಕಂದಾಯ ನಿಯಮಾವಳಿ 1966 ರ ನಿಯಮ 46
ರ ತಿದ್ದುಪಡಿಯಂತೆ ಜಾರಿಗೆ ತರಲಾಗಿದೆ. ಈ ಯೋಜನೆಯಿಂದ ಹಲವಾರು ಪ್ರಯೋಜನಗಳಾಗಿದ್ದು
ಸಾರ್ವಜನಿಕರಿಂದ ನಿಗಧಿತ ಶುಲ್ಕವನ್ನು ಪಾವತಿಸಿಕೊಂಡು ಪರವಾನಗಿ ಭೂಮಾಪಕರ ಸೇವೆಯನ್ನು
ಪಡೆದು ನೋಂದಣಿ ಪೂರ್ವ ಮತ್ತು ಮ್ಯುಟೇಷನ್ ಪೂರ್ವ ಹಾಜರುಪಡಿಸಬೇಕಾಂದತಹ 11 ಇ ನಕ್ಷೆ
ಗಳನ್ನು ತಯಾರಿಸಿ ಸಾರ್ವಜನಿಕರಿಗೆ ನೀಡಲಾಗುತ್ತಿದೆ. ಅಳತೆ ಮಾಡಲು ನಿಗಧಿತ ಶುಲ್ಕವನ್ನು
ಹೊರತುಪಡಿಸಿ ನಕ್ಷೆ ನೀಡಲು ಪ್ರತ್ಯೇಕ ಶುಲ್ಕವನ್ನು ವಸೂಲಿ ಮಾಡಲಾಗುತ್ತಿಲ್ಲ. ಹಲವಾರು
ಸಾರ್ವಜನಿಕರು ಹೀಗೆ ನೀಡಲಾಗಿರುವ 11 ಇ ನಕ್ಷೆಗಳನ್ನು ಕಳೆದುಕೊಂಡು ನಕಲನ್ನು ಕೋರಿ
ಅರ್ಜಿಗಳನ್ನು ನೀಡುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ನಕಲುಗಳನ್ನು ನೀಡುವುದು ಸಮಂಜಸ
ಕ್ರಮವಾಗಿರುತ್ತದೆ. ಆದಾಗ್ಯೂ ಅನಾವಶ್ಯಕವಾಗಿ ನಕಲು ಕೋರಿ ಬರುವಂತಹ ಅರ್ಜಿಗಳನ್ನು
ನಿಯಂತ್ರಿಸಲು ಯಥೋಚಿತ ಶುಲ್ಕವನ್ನು ನಿಗಧಿಪಡಿಸುವುದು ಅನಿವಾರ್ಯವಾಗಿದ್ದು, ರೂ.25.00 ಗಳನ್ನು
ಸಾರ್ವಜನಿಕರಿಂದ ಪಾವತಿಸಿಕೊಂಡು ಬಣ್ಣದ 11 ಇ ನಕ್ಷೆಯ ಛಾಯಾ ಪ್ರತಿಯನ್ನು ಸಾರ್ವಜನಿಕರಿಗೆ
ವಿತರಿಸುವ ಕುರಿತು ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ
ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಂ.ಇ 265 ಭೂದಾಸ 2008 ದಿನಾಂಕ:20.12.2008**

ತಾಲ್ಲೂಕು ಕಚೇರಿಯಲ್ಲಿ ಪರವಾನಗಿ ಭೂಮಾಪಕರ ಸೇವೆಯನ್ನು ಬಳಸಿ ನೋಂದಣಿ ಪೂ
ಮತ್ತು ಮ್ಯುಟೇಷನ್ ಪೂರ್ವ ಹಾಜರುಪಡಿಸಬೇಕಾದಂತಹ 11 ಇ ನಕ್ಷೆಗಳನ್ನು ತಯಾ
ಸಾರ್ವಜನಿಕರಿಗೆ ನೀಡಲಾಗುತ್ತಿದೆ. ಅಳತೆ ಮಾಡಲು ನಿಗಧಿತ ಶುಲ್ಕವನ್ನು ಹೊರತುಪಡಿಸಿ
ನೀಡಲು ಪ್ರತ್ಯೇಕ ಶುಲ್ಕವನ್ನು ವಸೂಲಿ ಮಾಡಲಾಗುತ್ತಿಲ್ಲ. ಸಾರ್ವಜನಿಕರು ಹೀಗೆ ನೀಡಲಾಗುವ
ನಕ್ಷೆಗಳನ್ನು ಕಳೆದುಕೊಂಡು ನಕಲುಗಳನ್ನು ಕೋರಿ ಅರ್ಜಿಗಳನ್ನು ನೀಡುತ್ತಿದ್ದಲ್ಲಿ, ಪ್ರತಿಯೊಂದು
ಛಾಯಾ ಪ್ರತಿಗೆ ರೂ.25/- ಶುಲ್ಕವನ್ನು ಪಾವತಿಸಿಕೊಂಡು ಸಾರ್ವಜನಿಕರಿಗೆ ವಿತರಿಸಲು ಸರ್ಕಾರ
ಮೂಲಕ ಅನುಮೋದನೆ ನೀಡಿದೆ. ಸಾರ್ವಜನಿಕರಿಂದ ಹೀಗೆ ಸ್ವೀಕೃತವಾಗುವ ಹಣವನ್ನು ಸರ

ಬೊಕ್ಕಸಕ್ಕೆ ಅಂದರೆ ಲೆಕ್ಕಶೀರ್ಷಿಕೆ 0029-00-106-0-02 ಕಂದಾಯ ಭೂಮಾಪನ ದಾಖಲೆಗೆ ಶುಲ್ಕಕ್ಕೆ ಜಮಾ ಮಾಡಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಜಿ.ಸಸಾಲಟ್ಟಿ) 20/12/08
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ(ಭೂಮಾಪನ)
20/12/08

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ,ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಸರ್ಕಾರದ ಖಜಾನೆ ಇಲಾಖೆ, ಬೆಂಗಳೂರು
4. ಉಪ ನಿರ್ದೇಶಕರು, ಖಜಾನೆ ಇಲಾಖೆ(ಅಂತರ್ಜಾಲ) ಖನಿಜ ಭವನ, ಬೆಂಗಳೂರು
5. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
6. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು
7. ಎಲ್ಲಾ ಜಿಲ್ಲಾಧಿಕಾರಿಗಳು
8. ಎಲ್ಲಾ ಉಪ ಆಯುಕ್ತರು
9. ಎಲ್ಲಾ ತಹಶೀಲ್ದಾರ್‌ಗಳು
10. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು
11. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ
12. ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರು, ದಕ್ಷಿಣ ವಲಯ/ಮೈಸೂರು, ಉತ್ತರ ವಲಯ/ಬೆಳಗಾಂ
13. ಸರ್ಕಾರದ ಉಪ ಕಾರ್ಯದರ್ಶಿ(ಭೂಮಾಪನ/ಭೂಸ್ವಾಧೀನ) ಕಂದಾಯ ಇಲಾಖೆ ರವರ ಆಪ್ತ ಸಹಾಯಕರು
14. ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ
15. ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರು(ಕಾ.ನಿ)
16. ಶಾ.ರ.ಕ./ಹೆಚ್ಚುವರಿ ಪ್ರತಿ